## ದೊಡ್ಡತಲೆ ಬುದ್ಧಿವಂತಿಕೆಯ ಪ್ರತಿರೂಪ!

ನವಜಾತ ಶಿಶುವಿನ ತಲೆ ದೊಡ್ಡದಾಗಿದ್ದರೆ, ಅದು ವಿಲಕ್ಷಣದ ರೂಪವಲ್ಲ. ಆ ಮಗುವಿನ ಬುದ್ಧಿವಂತಿಕೆಯ ಹಿರಿಮೆಯನ್ನು ತೋರಿಸುತ್ತದೆ ಎಂದು ಲಂಡನ್ ಸಂಶೋಧಕರ ಹೊಸ ಅಧ್ಯಯನ ಹೇಳಿದೆ.

ಶಿಶುವಿನ ತಲೆ ದೊಡ್ಡದಿದ್ದರೆ ಶಿರ ಭಾರ ಎನ್ನುವ ಅಣಕದ ಮಾತನ್ನು ಸಾಮಾನ್ಯವಾಗಿ ಕೇಳುತ್ತೇವೆ. ಆದರೆ ತಲೆಯ ಗಾತ್ರಕ್ಕೂ ಜಾಣತನಕ್ಕೂ ಸಂಬಂಧವಿದೆ. ತಲೆ ದೊಡ್ಡದಾಗಿದ್ದರೆ ಮಕ್ಕಳು ಹೆಚ್ಚು ಚುರುಕಾಗಿ ಇರುತ್ತಾರೆ. ಬೆಳೆದಂತೆ ಅವರ ಬುದ್ಧಿಮತ್ತೆಯೂ ಹೆಚ್ಚಾಗುತ್ತದೆ ಎಂದು ಸಂಶೋಧಕರು ಹೇಳಿದ್ದಾರೆ.

## ವಿಕಿರಣದಿಂದ ಕ್ಯಾನ್ಸರ್

ದೇಹವನ್ನು ವಿಕಿರಣಕ್ಕೆ ಒಡ್ಡಿಕೊಳ್ಳುವುದರಿಂದ ಡಿಎನ್‌ಎಗೆ ಹಾನಿ ಉಂಟಾಗುತ್ತದೆ. ಇದರ ಪರಿಣಾಮ ಕ್ಯಾನ್ಸರ್ ಕೂಡ ಬರಬಹುದು ಎಂದು ವೈದ್ಯರು ಅಭಿಪ್ರಾಯಪಟ್ಟಿದ್ದಾರೆ.

ವಿಕಿರಣಗಳು ಸೋಕುವುದರಿಂದ ಡಿಎನ್‌ಎಗೆ ಹಾನಿಯಾಗುತ್ತದೆ. ಅದು ಕ್ಯಾನ್ಸರ್ ಗೆಡ್ಡೆಗಳ ಬೆಳವಣಿಗೆಗೂ ಕಾರಣವಾಗುತ್ತದೆ. ತಜ್ಞ ವೈದ್ಯರು ಕ್ಯಾನ್ಸರ್ ಗೆಡ್ಡೆಗಳನ್ನು ಇಟ್ಟುಕೊಂಡು ಅದಕ್ಕೆ ಕಾರಣವನ್ನು ಹುಡುಕಿದಾಗ ಇದು ಗೊತ್ತಾಗಿದೆ ಎಂದು ಸಂಶೋಧಕರು ಹೇಳಿದ್ದಾರೆ.

ಎಕ್ಸ್ ರೇಯ ಸಂದರ್ಭದಲ್ಲಿ ಹೊರ ಹೊಮ್ಮುವ ಗಾಮ ವಿಕಿರಣಗಳು ಮತ್ತು ರೇಡಿಯೊ ಆ್ಯಕ್ಟಿವ್ ಕಿರಣಗಳು ಡಿಎನ್‌ಎ ರಚನೆಯನ್ನು ಭಂಜನಗೊಳಿಸುತ್ತವೆ ಎಂದು ವೈದ್ಯರು ಹೇಳಿದ್ದಾರೆ.

## ಅಂತರ್ಜಾಲ ವ್ಯಸನವಾಗಿ ಕಾಡೀತು!




ಯಾರು ತಮ್ಮ ದಿನದ ಹೆಚ್ಚಿನ ಸಮಯವನ್ನು ಅಂತರ್ಜಾಲದಲ್ಲಿ ಜಾಲಾಡುವುದಕ್ಕೆ ವ್ಯಯಿಸುತ್ತಾರೋ ಅಂತಹವರಿಗೆ ಮಾನಸಿಕ ಸಮಸ್ಯೆಗಳು ಕಾಡುವ ಸಾಧ್ಯತೆ ಹೆಚ್ಚಾಗುತ್ತದೆ ಎನ್ನುವುದು ಕೆನಡಾದ ಸಂಶೋಧಕರು ನಡೆಸಿದ ಸಮೀಕ್ಷಾ ಅಧ್ಯಯನ ಹೇಳಿದೆ.

ಕಳೆದ 18 ವರ್ಷಗಳಿಂದ ಈಚೆಗೆ ಅತಿ ಹೆಚ್ಚು ಜನರು ಅಂತರ್ಜಾಲವನ್ನು ಬಳಸುತ್ತಿದ್ದಾರೆ. ಬಹುತೇಕರು ತಮ್ಮ ಕಾರ್ಯ ನಿರ್ವಹಣೆಗೂ ಅದನ್ನೇ ಅವಲಂಬಿಸಿರುತ್ತಾರೆ. ಸಾಮಾಜಿಕ ಮಾಧ್ಯಮಗಳು ಇಂದು ಭ್ರಮಾತ್ಮಕ ಲೋಕವನ್ನು ಸೃಷ್ಟಿಸಿವೆ. ಅವು ಧನಾತ್ಮಕ ಲಾಭಗಳೇ ಹೆಚ್ಚು ಎಂದು ಹೇಳುತ್ತವೆ. ವಾಸ್ತವದಲ್ಲಿ ಅವುಗಳಿಂದ ಮಾನಸಿಕವಾಗಿ ಸಮಸ್ಯೆಗಳು ಉಂಟಾಗುತ್ತವೆ ಎಂದು ಸಂಶೋಧಕರು ಪ್ರತಿಪಾದಿಸಿದ್ದಾರೆ.

## ಜ್ಞಾಪಕಶಕ್ತಿ ಕುಂಠಿತಕ್ಕೆ ಹಾರ್ಮೋನ್ ಕಾರಣ

ಮಹಿಳೆಯರಿಗೆ ಮುಟ್ಟಿನ ದಿನಗಳಲ್ಲಿ ಉಂಟಾಗುವ ಹಾರ್ಮೋನಿನ ಏರುಪೇರು ಮಾನಸಿಕ ಬದಲಾವಣೆಯನ್ನೂ ಮಾಡುತ್ತದೆ. ಅದು ಅವರಲ್ಲಿದ್ದ ಸಮಸ್ಯೆಗಳನ್ನು ಪರಿಹರಿಸುವ ಕೌಶಲ್ಯದ ಮೇಲೂ ಪರಿಣಾಮ ಬೀರುತ್ತದೆ ಎಂದು ಕೆನಡಾದ ಸಂಶೋಧಕರ ಅಧ್ಯಯನ ಹೇಳಿದೆ.

ಹಾರ್ಮೋನುಗಳಲ್ಲಿ ಉಂಟಾಗುವ ಬದಲಾವಣೆ ಸ್ತ್ರೀಯರ ನಿರ್ಧರಿಸುವ ಶಕ್ತಿಯನ್ನೇ ಕುಂಠಿತ ಮಾಡುತ್ತದೆ. ಕೆಲವೊಮ್ಮೆ ಅವರ ಜ್ಞಾಪಕಶಕ್ತಿಯ ಮೇಲೂ ಅದರ ಪರಿಣಾಮ ಆಗುತ್ತದೆ ಎಂದು ತಜ್ಞರು ಹೇಳಿದ್ದಾರೆ.

ಇದಕ್ಕೆ ಮತ್ತೊಂದು ಪ್ರಮುಖ ಕಾರಣ ಎಂದರೆ, ಗರ್ಭಧಾರಣೆ ನಂತರದ ದಿನಗಳಲ್ಲಿ ಋತುಚಕ್ರದಲ್ಲಿ ಉಂಟಾಗುವ ವ್ಯತ್ಯಾಸ. ಇದೂ ಜ್ಞಾಪಕಶಕ್ತಿಯ ಮೇಲೆ ಪರಿಣಾಮ ಬೀರುತ್ತದೆ. ಈಸ್ಟ್ರೊಜೆನ್ ಮತ್ತು ಪ್ರೊಜೆಸ್ಟರಾನ್ ಎಂಬ ಹಾರ್ಮೋನುಗಳ ಉತ್ಪತ್ತಿಯಲ್ಲಿ ಆಗುವ ವ್ಯತ್ಯಾಸವೇ ಕಾರಣ ಎಂದು ಸಂಶೋಧಕರು ಅಭಿಪ್ರಾಯಪಟ್ಟಿದ್ದಾರೆ.

**ಟಿಪ್ಸ್**




ಸಿಗಂಧೂರು ಶ್ರೀದೇವಿ ಜ್ಯೋತಿಷ್ಯಂ



ಪ್ರಸಿದ್ಧ ಜ್ಯೋತಿಷ್ಯ ತಾಂತ್ರಿಕರು
ಶ್ರೀ ಚಂದ್ರಶೇಖರ್
ಕೇರಳ ಹಾಗೂ ಕೊಳ್ಳೆಗಾಲದ ಮಾಂತ್ರಿಕರು
98451 53558
ಭಾನಾಮತಿ ಸಿದ್ಧಿಸಾಧಕರು ಬೆಂಗಳೂರು ಮತ್ತು ಚೆನ್ನೈನಲ್ಲಿ ಅಪಾರ ಜನಮನ್ನಣೆ ಪಡೆದಿರುವ ಪ್ರಸಿದ್ಧ ಜ್ಯೋತಿಷ್ಯ ತಾಂತ್ರಿಕರು ಶ್ರೀ ಚಂದ್ರಶೇಖರ್‌ರವರು ಸಿಗಂಧೂರು ಚೌಡೇಶ್ವರಿ ದೇವಿಯ ಉಪಾಸಕರು ನಿಮ್ಮೆಲ್ಲ ಸಮಸ್ಯೆಗಳಿಗೆ ಶೀಘ್ರ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಕ್ರಿಶ್ಚಿಯನ್ ಹಾಗು ಮುಸ್ಲಿಂ ಬಾಂಧವರಿಗೆ ಯಂತ್ರ ಮಂತ್ರಗಳ ಸಹಾಯವಿಲ್ಲದೆ ಕಾರ್ಯಸಿದ್ಧಿ ಮಾಡಿಕೊಡಲಾಗುವುದು
ಸ್ತ್ರೀಯರಿಗೆ ವಿಶೇಷ ಪರಿಹಾರ
ಮದುವೆ ವಿಳಂಬ, ಪ್ರೀತಿಯಲ್ಲಿ ನಂಬಿ ಮೋಸ, ಇಷ್ಟಪಟ್ಟವರಿಂದ ಅನುಕೂಲ ಮಾಡಿಕೊಳ್ಳಲು, ಗಂಡ ಹೆಂಡತಿ ಕಲಹ, ವ್ಯಾಪಾರಾಭಿವೃದ್ಧಿ, ಸಾಲಗಾರರ ಕಿರಿಕಿರಿ, ಸಂತಾನ ಸಮಸ್ಯೆ, ಆರೋಗ್ಯ, ಲೈಂಗಿಕ ಸಮಸ್ಯೆ, ಕುಟುಂಬ ಕಲಹ, ಮಾಟಮಂತ್ರ ನಿವಾರಣೆ, ಸ್ತ್ರೀಯರ personal problems, ಇಷ್ಟಪಟ್ಟವರು ನಿಮ್ಮಂತಾಗಲು, ಹಣಕಾಸು, ಮಕ್ಕಳು ಪ್ರೀತಿ ಪ್ರೇಮದಲ್ಲಿ ಬಿದ್ದು ತಂದೆ ತಾಯಿಗಳ ಮಾತು ಕೇಳದಿದ್ದಲ್ಲಿ
ಸ್ತ್ರೀ ಪುರುಷರ ಕಠಿಣ ಸಮಸ್ಯೆಗಳನ್ನು ಗುಪ್ತವಾಗಿರಿಸಿ ಅತೀ ಶೀಘ್ರದಲ್ಲಿ ಪರಿಹಾರ ಮಾಡಿಕೊಡಲಾಗುವುದು
ಖಾಯಂ ಮನೆ ವಿಳಾಸ:
ಸಿಗಂಧೂರು ಶ್ರೀದೇವಿ ಜ್ಯೋತಿಷ್ಯಂ, ತಾಂತ್ರಿಕರು ಶ್ರೀ ಚಂದ್ರಶೇಖರ್
ವಿಜಯನಗರ ಮುಖ್ಯ ಬಸ್ ನಿಲ್ದಾಣ, ಇಂದ್ರಪ್ರಸ್ಥ ಹೋಟೆಲ್ ಹತ್ತಿರ, ಪೋಸ್ಟ್ ಆಫೀಸ್ ರೋಡ್, ಬ್ಯಾಂಕ್ ಆಫ್ ಬರೋಡ ಪಕ್ಕ
ವಿಜಯನಗರ, ಬೆಂಗಳೂರು